ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯ್ತು.      ದಿನಾಂಕಃ 25-9-2014.

ಮುಖ್ಯ ವಿಚಾರಣೆ ಃ ಶ್ರೀ ಹೆಚ್‌ಬಿಎಂ ವಕೀಲರಿಂದ ಃ-

ನಾನು ಈ ದಾವೆಯಲ್ಲಿ /ಅರ್ಜಿಯಲ್ಲಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ.

ನಾನು ವಂಶವೃಕ್ಷವನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ1 ಎಂದು, ಮೃತ ಮಹದೇವಮ್ಮ ಇವರು ಅಸಲು ದಾವೆ ನಂ.12ಃ2009 ರಲ್ಲಿ ಸಲ್ಲಿಸಿದಂತಹ ದಾವೆಯ ದಾವಾ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ2 ಎಂದು, ಆ ದಾವೆಯಲ್ಲಿ ಪ್ರತಿವಾದಿ ಸಲ್ಲಿಸಿದ ಲಿಖಿತ ಪ್ರತಿವಾದ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ3 ಎಂದು, ಅದರಲ್ಲಿ ಆದಂತಹ ವಿವಾದಾಂಶವನ್ನು ನಿಪಿ4 ಎಂದು, ದತ್ತು ಸ್ವೀಕಾರ ಪತ್ರವನ್ನು ನಿಪಿ5 ಎಂದು, ಒಂದು ವಿಲ್‌ನ ಮರಣ ಶಾಸನ ಪತ್ರದ ದೃಢೀಕೃತ ನಕಲು ಹಾಜರು ಮಾಡಿದ್ದೇನೆ ಅದನ್ನು ಕಾಯಿದೆ ಪ್ರಕಾರ ನಿಶಾನೆಗೊಳಿಸಲು ಬಾರದೇ ಇರುವುದರಿಂದ ನಿಶಾನೆಗೊಳಿಸಲಾಗಿಲ್ಲ. ಮಹದೇವಮ್ಮ ಇವರ ಮರಣ ದೃಢೀಕೃತ ಪತ್ರವನ್ನು ನಿಪಿ6 ಎಂದು, ಮಹದೇವಮ್ಮ ತೀರಿಕೊಂಡ ನಂತರ ಅವರ ವಾರಸುದಾರರಾಗಿ ತಮ್ಮನ್ನು ಸೇರಿಸಬೇಕೆಂದು ಅರ್ಜಿಯ ಮೇಲೆ ಆದ ಆದೇಶದ ದೃಢೀಕೃತ ನಕಲನ್ನು ನಿಪಿ7 ಎಂದು, ಅಸಲು ದಾವಾ ಸಂಖ್ಯೆಃ12ಃ2009 ರ ತೀರ್ಪಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ8 ಎಂದು, ಆ ತೀರ್ಪಿನ ಡಿಕ್ರಿಯನ್ನು ನಿಪಿ9 ಎಂದು, ಸದರಿ ತೀರ್ಪಿನ ವಿರುದ್ದ ಸಲ್ಲಿಸಿದ ಮೇಲ್ಮನವಿಯ ದೃಢೀಕೃತ ನಕಲನ್ನು ನಿಪಿ10 ಎಂದು, ಅಲ್ಲಿಯ ಡಿಕ್ರಿಯನ್ನು ನಿಪಿ11 ಎಂದು, 10 ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳನ್ನು ಹಾಜರು ಮಾಡಿದ್ದೇನೆ ನಿಪಿ12 ರಿಂದ 21 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ಹರಪನಹಳ್ಳಿ.